ಹಾವೆಂದು ಕೊಂಡಿರುವವನಿಗೆ ಆ ಸರ್ಪಭಾವದ ಅನುಭೂತಿ ಇರುವವರೆಗೂ ಆ ಅನುಭೂತಿಯೇ ಸತ್ಯವೇ ಹೊರತು, ಅವನಿಗೆ ಆ ಕಾಲದ ಮಟ್ಟಿಗೆ ಅದರ ಹಗ್ಗತನದ ಕಗ್ಗಸತ್ಯವೇನೂ ಪ್ರಯೋಜನಕ್ಕೆ ಬರುವುದಿಲ್ಲ. ಎಂದ ಮಾತ್ರಕ್ಕೆ ಅವನು ಅದನ್ನು ಹಗ್ಗವೆಂದು ಮುಂದೆಂದೂ ಅರಿಯಲಾರನೆ?

ಈ ಧರ್ಮ, ಸತ್ಯವೇ ದೇವರೆಂಬ ಈ ಭಾವನೆ, ಪ್ರಚಾರಕ್ಕೆ ಹೊರಡುವುದಿಲ್ಲ. ಸತ್ಯವನ್ನು ಒಬ್ಬೊಬ್ಬನೂ ಅನ್ವೇಷಿಸಿ ಅನುಭವಿಸಿ ತಿಳಿದುಕೊಳ್ಳಬೇಕಾಗಿರುವಾಗ ಪ್ರಚಾರದ ಅಗತ್ಯವೆಲ್ಲಿದೆ, ಪ್ರಚಾರ ಮಾಡುವುದಕ್ಕೆ ಏನಿದೆ? ಜನಕ್ಕೆ ಧರ್ಮ ಒಂದೇ ಬಾಳಿನ ಬೆಳಕಾಗಿದ್ದಾಗ ಧರ್ಮ ಬೇಕಾದಷ್ಟನ್ನು ಹೇಳಿತು, ಬೇಡವಾದ್ದನ್ನೂ ಹೇಳಿತು, ಕೇಳದಿದ್ದರೂ ಹೇಳಿತು, ಹೇಳಿಕೆಗಳು ಪರಸ್ಪರ ವಿರೋಧಾಭಾಸಗಳಾಗಿದ್ದರೂ ಹೇಳಿತು. ಆದರೆ ಈಗಿನ ಜನರು ತಮ್ಮ ಸಮಸ್ಯೆಗಳಿಗೆ ಅನ್ವೇಷಿಸಿ ಪರಿಹಾರವನ್ನು ಕಂಡುಕೊಳ್ಳುವ ವಿಧಾನವನ್ನು ಕಲಿತಿದ್ದಾರೆ. ಆಸ್ಫೋಟಕವಾಗಿ ಬೆಳೆಯುತ್ತಿರುವ ವಿಜ್ಞಾನ, ತಾಂತ್ರಿಕತೆಗಳು ಸಾಂಪ್ರದಾಯಿಕ ಧರ್ಮಕ್ಕೆ ಸವಾಲಾಗಿ ನಿಂತಿವೆ. ಆದರೆ ದೈನಂದಿನ ಸಮಸ್ಯೆಗಳಿಗೆ ಪರಿಹಾರವನ್ನೊದಗಿಸುವುದರಲ್ಲಿ ಅವು ವಿಫಲವಾಗಿವೆ. ಈ ಹಿನ್ನೆಲೆಯಲ್ಲಿ ಸತ್ಯವೇ ದೇವರೆಂಬ ಗಾಂಧೀಜಿಯ ಧರ್ಮ ಹೆಚ್ಚು ಆದರಣೀಯ. ✻

ಐನ್‌ಸ್ಟೈನ್ ಅವರ ಕೊಠಡಿಯಲ್ಲಿ ಕೇವಲ ಮೂರು ವ್ಯಕ್ತಿಗಳ ಚಿತ್ರಪಟಗಳಿದ್ದುವೆಂಬುದನ್ನು ಅರಿಯಲು ಆಶ್ಚರ್ಯವಾಗುತ್ತದೆ. ಅವುಗಳೆಂದರೆ ಫ್ಯಾರಡೆ, ಮ್ಯಾಕ್ಸ್‌ವೆಲ್ ಹಾಗೂ ಗಾಂಧೀಜಿ. ಅವರು ಒಮ್ಮೆ ಹೇಳಿದರು : "ನಮ್ಮ ಕಾಲದ ಅತ್ಯಂತ ಸತ್ಯವಂತ ರಾಜಕೀಯ ವ್ಯಕ್ತಿ ಎಂದರೆ ಮಹಾತ್ಮಾ ಗಾಂಧಿ ಮಾತ್ರ. ಅವರು ನಿಜವಾಗಿ ನಮ್ಮ ಕಾಲದ ಗರಿಷ್ಠ ವ್ಯಕ್ತಿ." ಗಾಂಧೀಜಿಯ ಹತ್ಯೆ ವಾರ್ತೆ ಕೇಳಿ ಹೇಳಿದರು, "ಇಂತಹ ಒಬ್ಬ ವ್ಯಕ್ತಿ ಎಂದಾದರೂ ಈ ನೆಲದ ಮೇಲೆ ಓಡಾಡಿದ್ದರು ಎಂದು ಮುಂದಿನ ಜನಾಂಗಕ್ಕೆ ಬಹುಶಃ ನಂಬುವುದಕ್ಕೆ ಅಸಾಧ್ಯವಾಗುತ್ತದೆ."

# ಸ್ವಾಮಿ ವಿವೇಕಾನಂದರ ವೈಜ್ಞಾನಿಕ ಮನೋಭಾವ

ಪ್ರೊ. ಎನ್. ಕೃಷ್ಣಸ್ವಾಮಿ

ಸ್ವಾಮಿ ವಿವೇಕಾನಂದರ ವೈಜ್ಞಾನಿಕ ಮನೋಭಾವದ ಕುರಿತ ಕಳೆದ ಸಂಚಿಕೆಯಲ್ಲಿನ ಲೇಖನದ ಮುಕ್ತಾಯ ಭಾಗ ಇದು. ಸತ್ಯದ ಆರಾಧಕರಾಗಿದ್ದ ಸ್ವಾಮಿಜೀಯವರಿಗೆ ವಿಜ್ಞಾನದ ನಿಕಟ ಪರಿಚಯವಿದ್ದದ್ದು ಮಾತ್ರವಲ್ಲದೆ ಅದರ ಇತಿ-ಮಿತಿಗಳ ಅರಿವಿತ್ತು ಎಂಬುದಾಗಿ ಪ್ರೊ.ಕೃಷ್ಣಸ್ವಾಮಿಯವರು ಈ ಲೇಖನದಲ್ಲಿ ತಿಳಿಸುತ್ತಾರೆ.

## ಜಗದೀಶ್ ಚಂದ್ರ ಬೋಸ್

ನಮ್ಮ ದೇಶದ ಅತಿ ಶ್ರೇಷ್ಠ ವಿಜ್ಞಾನಿಗಳಲ್ಲಿ ಒಬ್ಬರು ಡಾ.ಜೆ.ಸಿ.ಬೋಸ್. ಇವರನ್ನು ವಿವೇಕಾನಂದರು ಅಮೆರಿಕದಿಂದ ಹಿಂದಿರುಗಿದಾಗ ಭಾರತದಲ್ಲಿಯೇ ನೋಡಿದ್ದರು. ಆದರೆ ಅವರು ಎರಡನೆಯ ಸಲ ವಿದೇಶಯಾತ್ರೆ ಮಾಡಿ ಅಮೆರಿಕದಿಂದ ಹಿಂದಿರುಗುವಾಗ, ೧೯೦೦ ಸೆಪ್ಟೆಂಬರ್ ೩ರಿಂದ ೮ರವರೆಗೆ ಪ್ಯಾರಿಸ್ಸಿನಲ್ಲಿ ಜರುಗಿದ ಕಾಂಗ್ರೆಸ್ ಆಫ್ ದಿ ಹಿಸ್ಟರಿ ಆಫ್ ರಿಲಿಜನ್ಸ್ (ಧರ್ಮಗಳ ಚರಿತ್ರೆಯ ಮಹಾಸಭೆ)ನಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರಿಗೆ ಅನೇಕ ವಿದ್ವಾಂಸರ ನಿಕಟ ಪರಿಚಯ ಮಾಡಿಕೊಳ್ಳುವ ಅವಕಾಶ ಸಿಕ್ಕಿತು. ಇವರ ಪೈಕಿ ನಮ್ಮ ದೇಶದವರೇ ಆದ ಡಾ. ಜಗದೀಶ ಚಂದ್ರ ಬೋಸರೂ ಇದ್ದರು.



ಜಗದೀಶ್ ಚಂದ್ರ ಬೋಸ್

ಇಂಗ್ಲಿಷಿನ *Life of Swami Vivekananda* (II.ಪು.538)ದಲ್ಲಿ ಇದರ ಉಲ್ಲೇಖ ಇದೆ:

"...... ಡಾ. ಜಗದೀಶ್ ಚಂದ್ರ ಬೋಸ್ ಅವರ ಸಸ್ಯಗಳ ಸಂವೇದನೆಯ ವಿಷಯದ ಗಮನಾರ್ಹ ಅನ್ವೇಷಣೆಗಳು ವೈಜ್ಞಾನಿಕ ಪ್ರಪಂಚವನ್ನು ವಿಸ್ಮಯಗೊಳಿಸಿವೆ. ಡಾ.ಬೋಸ್ ಅವರನ್ನು ಮಹಾಪ್ರದರ್ಶನದಲ್ಲಿನ ವಿಜ್ಞಾನಿಗಳ ಸಭೆಗೆ ಆಹ್ವಾನಿಸಲಾಗಿತ್ತು, ಮತ್ತು ಸ್ವಾಮೀಜಿ ಅವರನ್ನು ಹಲವು ಸಲ ಭೇಟಿ ಮಾಡಿದರು. ಅನೇಕ ಸಲ ಅವರು ತಮ್ಮೊಡನೆ ಇದ್ದವರಿಗೆ "ಬಂಗಾಲದ ಹೆಮ್ಮೆ ಮತ್ತು ಉಜ್ವಲ ಯಶಸ್ಸು" ಎನಿಸಿರುವ ಈ ಭಾರತೀಯ ವಿಜ್ಞಾನಿಯ ಮಹಿಮೆಯನ್ನು ವಿವರಿಸುತ್ತಿದ್ದರು. ಒಂದು ಸಂದರ್ಭದಲ್ಲಿ ಹಲವು ವಿಖ್ಯಾತ ವ್ಯಕ್ತಿಗಳ ಗುಂಪಿನಲ್ಲಿ ಒಬ್ಬ ವಿದ್ಯಾರ್ಥಿನಿ ಖ್ಯಾತ ಬ್ರಿಟಿಷ್ ವಿಜ್ಞಾನಿಯಾದ ತನ್ನ ಪ್ರೊಫೆಸರರು, ಕುಬ್ಜ ಕಮಲ ಪುಷ್ಪದ ಬೆಳವಣಿಗೆಯನ್ನು ಕುರಿತು ಪ್ರಯೋಗಗಳನ್ನು ನಡೆಸುತ್ತಿರುವರೆಂದು ಕೊಚ್ಚಿಕೊಂಡಳು. ಆಗ ಸ್ವಾಮೀಜಿ ಹಾಸ್ಯದೊಡನೆ ಉತ್ತರಿಸಿದರು: "ಅರೆ! ಅದೇನು ಮಹಾ! ಬೋಸರು ಆ ಕಮಲದ ಗಿಡ ಬೆಳೆದಿರುವ ಪುಷ್ಪ ಕುಂಡವೇ ಪ್ರತಿಕ್ರಿಯಿಸುವಂತೆ ಮಾಡಬಲ್ಲರು!"

ಹೀಗೆ ಸ್ವಾಮೀಜಿಯವರಿಗೆ ಡಾ. ಬೋಸರ ಮೇಲೆ ಬಹಳ ಅಭಿಮಾನವಿದ್ದಿತು. ಅವರ ಶಿಷ್ಯೆ

ನಿವೇದಿತಾ ಬೋಸ್ ದಂಪತಿಗಳ ನಿಕಟವರ್ತಿಯಾಗಿದ್ದಳು. ವಿವೇಕಾನಂದರ ಕಾಲದ ನಂತರ ಸೋದರಿ ನಿವೇದಿತಾ ಡಾ.ಬೋಸರ ವೈಜ್ಞಾನಿಕ ಸಂಶೋಧನೆಗಳು ಮುಂದುವರಿಯಲು ಎಲ್ಲ ಸಹಾಯ ಮಾಡಿದಳು. ಅವರ ಲೇಖನಗಳನ್ನು ಬರೆಯುವುದರಲ್ಲಿ ಪ್ರಕಟಣೆಗೆ ಸಿದ್ಧಪಡಿಸುವುದರಲ್ಲಿ ಆಕೆ ನೆರವು ನೀಡಿದಳು.

ಬೋಸರ ಶಿಷ್ಯ ಡಾ. ಬೊಶಿ·ಸೇನ್ ಸಹ ಬೋಸರ ಸಂಶೋಧನೆಗಳನ್ನು ಮುಂದುವರಿಸಿದ. ಈತನು ಆಲ್ಮೋರಾದಲ್ಲಿ ಸ್ಥಾಪಿಸಿರುವ ವಿವೇಕಾನಂದ ಲ್ಯಾಬೊರೇಟರಿ ಸಸ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆ ಸಂಶೋಧನೆಗಳನ್ನು ಮಾಡಿ ಹೆಸರು ಗಳಿಸಿದೆ.

> ಧರ್ಮ ಎನ್ನುವುದು ಯಾವಾಗಲೂ ಪ್ರಯೋಗಾತ್ಮಕ ವಿಜ್ಞಾನವಾಗಿರುತ್ತದೆ. ಕೇವಲ ಸೈದ್ಧಾಂತಿಕ ಧರ್ಮ ಇರಲೂ ಇಲ್ಲ, ಇರುವುದೂ ಇಲ್ಲ
>
> —ಸ್ವಾಮಿ ವಿವೇಕಾನಂದ

## ಧರ್ಮವೂ ವಿಜ್ಞಾನದಂತೆಯೇ

"ಧರ್ಮ: ಅದರ ಮಾರ್ಗಗಳು ಮತ್ತು ಉದ್ದೇಶ" ಎಂಬ ಭಾಷಣದಲ್ಲಿ (ಕೃತಿಶ್ರೇಣಿ VI. ಪು. 371) ಸ್ವಾಮೀಜಿ ವಿಜ್ಞಾನದಲ್ಲಿರುವ ಹಾಗೆಯೇ ಆಧ್ಯಾತ್ಮಿಕ ಜೀವನದಲ್ಲಿಯೂ ಸಾಕ್ಷಾತ್ಕಾರ ಪಡೆಯಲು ಕೆಲವು ಸಾಧನೆಗಳನ್ನು ಮಾಡಬೇಕೆಂದು ಒತ್ತಿ ಹೇಳುತ್ತಾರೆ:

"ಅನೇಕರು ಹೀಗೆ ಹೇಳುವುದನ್ನು ನೋಡಬಹುದು: 'ನಾನು ಧಾರ್ಮಿಕನಾಗಬೇಕೆಂದು ಇದ್ದೆ, ಅವುಗಳನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂದು ಇದ್ದೆ, ಆದರೆ ನನಗೆ ಸಾಧ್ಯವಾಗಲಿಲ್ಲ. ಆದುದರಿಂದ ನಾನು ಏನನ್ನೂ ನಂಬುವುದಿಲ್ಲ.' ವಿದ್ಯಾವಂತರಲ್ಲಿಯೂ ಇಂಥವರಿರುವರು. ಬಹು ಜನ ನಿಮಗೆ ಹೇಳುವರು, 'ಇಡೀ ಜೀವನ ನಾನು ಧಾರ್ಮಿಕನಾಗಬೇಕೆಂದು ಯತ್ನಿಸಿದೆ, ಆದರೆ ಅದರಲ್ಲಿ ಏನೂ ಇಲ್ಲ.' ಇದೇ ಸಮಯದಲ್ಲಿ ನೀವು ಈ ಒಂದು ವಿಷಯವನ್ನು ಗಮನಿಸುವಿರಿ : ಒಬ್ಬ ರಸಾಯನ ಶಾಸ್ತ್ರಜ್ಞ , ದೊಡ್ಡ ವಿಜ್ಞಾನಿ ಇರುವನೆಂದು ಇಟ್ಟುಕೊಳ್ಳೋಣ. ಅವನು ಬಂದು ನಿಮ್ಮಲ್ಲಿ (ವಿಜ್ಞಾನದ ವಿಷಯ) ಹೇಳುವನು. ನೀವು ಅವನಿಗೆ ಹೀಗೆ ಹೇಳಿದರೆ, 'ನಾನು ರಸಾಯನ ಶಾಸ್ತ್ರದಲ್ಲಿ ಏನನ್ನೂ ನಂಬುವುದಿಲ್ಲ, ಏಕೆಂದರೆ ನಾನು ಇದುವರೆಗೆ ಒಬ್ಬ ರಾಸಾಯನ ಶಾಸ್ತ್ರಜ್ಞನಾಗಲು ಯತ್ನಿಸಿದೆ, ಸಾಧ್ಯವಾಗಲಿಲ್ಲ,' ಆಗ ಅವನು 'ನೀನು ಯಾವಾಗ ಪ್ರಯತ್ನಿಸಿದೆ?' ಎಂದು ಕೇಳುವನು. 'ನಾನು ಮಲಗುವಾಗ, ಓ ರಸಾಯನ ಶಾಸ್ತ್ರವೇ! ನನ್ನಲ್ಲಿಗೆ ಬಾ, ಎಂದು ಹೇಳುತ್ತಿದ್ದೆ, ಆದರೂ ಅದು ಬರಲಿಲ್ಲ' ಎಂದು ಹೇಳಿದರೆ ರಸಾಯನ ಶಾಸ್ತ್ರಜ್ಞ ನಕ್ಕು ಹೇಳುವನು, 'ಓ, ಅದಲ್ಲ ಮಾರ್ಗ, ನೀನು ಪ್ರಯೋಗಶಾಲೆಗೆ ಹೋಗಿ ಆಸಿಡ್, ಆಲ್ಕಲಿಗಳೊಡನೆ ಪ್ರಯೋಗ ಮಾಡಬೇಕಾಗಿತ್ತು. ಆಗಾಗ ಕೈಸುಟ್ಟುಕೊಳ್ಳಬೇಕಾಗಿತ್ತು. ಈ ಸಾಧನೆಯಿಂದ ಮಾತ್ರ ನೀನು ಕಲಿಯಬಹುದಿತ್ತು.' " (ಕೃ.ಶ್ರೇ.೬.೩೭೧)

## ವಿಜ್ಞಾನದ ಮೂಢ ನಂಬಿಕೆ

"ಈಗಿನ ಕಾಲದಲ್ಲಿ ಒಬ್ಬ ಮೋಸಸ್ಸನನ್ನು, ಕ್ರಿಸ್ತನನ್ನು ಅಥವಾ ಬುದ್ಧನನ್ನು ಉದಾಹರಿಸಿದರೆ ಜನ ನಗುವರು. ಆದರೆ ಹಕ್ಸ್‌ಲಿ, ಟಿಂಡಲ್, ಡಾರ್ವಿನ್ ಇವರ ಹೆಸರು ಹೇಳಿದರೆ ಜನ ಅದನ್ನು ಉಪ್ಪು ಸಹ ಸೇರಿಸದೆ ನುಂಗಿಬಿಡುವರು. ಹಕ್ಸ್‌ಲಿ ಹೀಗೆ ಹೇಳಿದ್ದಾನೆ ಎಂದರೆ ಜನರಿಗೆ ಅದೇ ಸಾಕು. ನಾವು ನಿಜವಾಗಿಯೂ ಮೂಢ ನಂಬಿಕೆಗಳಿಂದ ಪಾರಾಗಿರುವೆವು ಅಲ್ಲವೆ! ಅದು ಒಂದು ಧರ್ಮದ ಮೂಢ ನಂಬಿಕೆ, ಇದು ವೈಜ್ಞಾನಿಕ ಮೂಢನಂಬಿಕೆ! ಆದರೆ ಹಿಂದಿನ ಕಾಲದ ಮೂಢನಂಬಿಕೆಗಳಿಂದ ಜೀವಪ್ರದಾನ ಮಾಡುವ ಆಧ್ಯಾತ್ಮಿಕ ಭಾವನೆಗಳು ಉದಿಸಿದವು. ಆಧುನಿಕ ಮೂಢನಂಬಿಕೆಗಳಿಂದ ಕಾಮ-ಲೋಭಗಳು ಜನಿಸುತ್ತಿವೆ. ಆ ಮೂಢನಂಬಿಕೆ ಭಗವದಾರಾಧನೆಯಾದರೆ ಈ ಮೂಢನಂಬಿಕೆ ನಶ್ವರ ಐಶ್ವರ್ಯ, ಕೀರ್ತಿ, ಅಧಿಕಾರ ಇವುಗಳ ಆರಾಧನೆಯಾಗಿದೆ. ಇಷ್ಟೆ ವ್ಯತ್ಯಾಸ" (ಕೃ.ಶ್ರೇ.೨.೧೭-೧೮).

ಸ್ವಾಮೀಜಿ ನಮಗೆ ಕೊಟ್ಟಿರುವ ಈ ಎಚ್ಚರಿಕೆಯ ಮಾತುಗಳನ್ನು ಶ್ರದ್ಧೆಯಿಂದ ಆಲಿಸೋಣ. ಎಲ್ಲ ಮೂಢನಂಬಿಕೆಗಳನ್ನೂ ಪ್ರಶ್ನಿಸೋಣ. ಮೂಢನಂಬಿಕೆಯಿಂದ ಹಿತವಾಗುವುದಾದರೆ ಅದೂ ಆಗಲಿ! ಆದರೆ ಎಚ್ಚರಿಕೆ ಅಗತ್ಯ. ಬುದ್ಧನ "ಅಪ್ರಮತ್ತತೆ" ಅತ್ಯಗತ್ಯ.

ಈ ದೃಷ್ಟಿಯಿಂದ ಸ್ವಾಮೀಜಿ ಅಮೆರಿಕದಲ್ಲಿ ವೈದ್ಯರನ್ನು ಕಟುವಾಗಿ ಟೀಕಿಸುವುದನ್ನು ಕಾಣುತ್ತೇವೆ. ಏಕೆಂದರೆ ಆ ವೈದ್ಯರು ಬ್ರಹ್ಮಚರ್ಯ, ಇಂದ್ರಿಯನಿಗ್ರಹದಿಂದ ಮಾನವ ಹುಚ್ಚನಾಗುವನೆಂದೂ ಸ್ವೇಚ್ಛಾಚಾರವೇ ಆರೋಗ್ಯಕರವೆಂದೂ ಬೋಧಿಸುತ್ತಿದ್ದರು.

> ಈ ಅಲ್ಪ ಜಗತ್ತು ಎಲ್ಲಿ ಕೊನೆಗೊಳ್ಳುವುದೊ ಅಲ್ಲಿ ನಿಜವಾದ ಧರ್ಮ ಪ್ರಾರಂಭವಾಗುತ್ತದೆ.
>
> —ಸ್ವಾಮಿ ವಿವೇಕಾನಂದ

ಪ್ರೊಫೆಸರ್ ಸುಂದರರಾಮ ಅಯ್ಯರ್ ಸ್ವಾಮಿ ವಿವೇಕಾನಂದರ ತಿರುವನಂತಪುರದ ಭೇಟಿ(1892)ಯ ಕಾಲದಲ್ಲಿ ಅವರೊಡನೆ ಎನಡೆಸಿದ ಸಂಭಾಷಣೆಗಳ ವಿಷಯವನ್ನು ಬರೆಯುವಾಗ ಈ ವಿಷಯವನ್ನೂ ತಿಳಿಸುತ್ತಾರೆ—

"ವಿಜ್ಞಾನ ಮಾನವನ ನಂಬಿಕೆಗಳನ್ನು ತನ್ನ ಕಡೆಗೇ ಸೆಳೆದುಕೊಳ್ಳಲು ಮಾಡುವ ಪ್ರಯತ್ನಗಳನ್ನು ಖಂಡಿಸುತ್ತ ಸ್ವಾಮಿಗಳು ಒಮ್ಮೆ ಹೇಳಿದರು: 'ಧರ್ಮದಲ್ಲಿ ಮೂಢನಂಬಿಕೆಗಳು ಇದ್ದರೆ ವಿಜ್ಞಾನದಲ್ಲಿಯೂ ಅದರದೇ ಮೂಢನಂಬಿಕೆಗಳಿವೆ. ಯಾಂತ್ರಿಕ ಮತ್ತು ವಿಕಾಸವಾದದ ಸಿದ್ಧಾಂತಗಳೆರಡೂ, ಅವನ್ನು ಪರೀಕ್ಷಿಸಿದರೆ, ಅಸಮರ್ಪಕ ಮತ್ತು ಅತೃಪ್ತಿಕರವೆಂದು ಸಾಬೀತಾಗಿದ್ದರೂ ಸಹ ಬಹು ಜನರು ಇಡೀ ವಿಶ್ವವೇ ಒಂದು ಬಯಲಾದ ರಹಸ್ಯ ಎನ್ನುವ ಹಾಗೆ ಮಾತನಾಡುತ್ತಾರೆ. ಅಜ್ಞೇಯತಾವಾದ (*Agnosticism*) ಸಹ ಮಾನವನ ಎಣಿಕೆಯಲ್ಲಿ ಬೃಹತ್ತಾಗಿ ಮೆರೆಯುವುದು ಕಂಡುಬರುತ್ತದೆ; ಆದರೆ ಭಾರತೀಯ ವಿಜ್ಞಾನದ ಮನೋನಿಗ್ರಹದ ನಿಯಮಗಳನ್ನೂ ಸತ್ಯಗಳನ್ನೂ ನಿರ್ಲಕ್ಷಿಸುವುದರಿಂದ ಅದು ತನ್ನ

ಅಜ್ಞಾನವನ್ನೂ ಡಾಂಭಿಕತೆಯನ್ನೂ ಪ್ರದರ್ಶಿಸಿದೆ. ಮಾನವ-ಪ್ರಕೃತಿಯ ಪ್ರಜ್ಞಾತೀತ ಮುಖಗಳನ್ನೂ ನಿಯಮಗಳನ್ನೂ ತಿಳಿಯಲಾರದೆ ಪಾಶ್ಚಾತ್ಯ ಮನಶ್ಶಾಸ್ತ್ರ ನಿಶ್ಶಕ್ತವಾಗಿ ಸೋಲುತ್ತದೆ. ಎಲ್ಲಿ ಯೂರೋಪಿನ ವಿಜ್ಞಾನ ಹಿಂದೇಟು ಹಾಕಿದೆಯೋ ಅಲ್ಲಿ ಭಾರತೀಯ ಮನಶ್ಶಾಸ್ತ್ರ ಬಂದು ಉಚ್ಚತರ ಸ್ತರದ ಇರುವಿಕೆ ಮತ್ತು ಅನುಭವಗಳನ್ನು ಅರ್ಥೈಸಲು, ಚಿತ್ರಿಸಲು ಮತ್ತು ಬೋಧಿಸಲು ಆರಂಭಿಸುತ್ತವೆ.

ಧರ್ಮ ಮಾತ್ರವೇ, ಅದರಲ್ಲಿಯೂ ಭಾರತದ ಋಷಿಗಳ ಧರ್ಮವೇ, ವಿಶಿಷ್ಟವಾಗಿ ಮಾನವ ಮನಸ್ಸಿನ ಸೂಕ್ಷ್ಮ ಮತ್ತು ರಹಸ್ಯ ಕಾರ್ಯಗಳನ್ನು ಅರ್ಥಮಾಡಿಕೊಳ್ಳಬಲ್ಲುದು, ಮತ್ತು ತನ್ಮೂಲಕ ಅನಾಧ್ಯಾತ್ಮಿಕ ಆಸೆಗಳನ್ನು ಅತಿಕ್ರಮಿಸಿ ಸತ್ಯವಿರುವುದೊಂದೇ, ಉಳಿದುದೆಲ್ಲವೂ ಮಾಯಾಕಲ್ಪಿತ ಎಂಬ ಸಾಕ್ಷಾತ್ಕಾರಕ್ಕೆ ಆಸ್ಪದ ಮಾಡುವುದು." ಹೀಗೆ ಸ್ವಾಮಿ ವಿವೇಕಾನಂದರು ವಿಜ್ಞಾನವನ್ನು ಅರ್ಥ ಮಾಡಿಕೊಂಡಿದ್ದುದು ಮಾತ್ರವಲ್ಲದೆ, ಅದರ ಇತಿ-ಮಿತಿಗಳನ್ನೂ ಅರ್ಥ ಮಾಡಿಕೊಂಡಿದ್ದರು.

**ಉಪಸಂಹಾರ**

ಸತ್ಯ ಒಂದೇ. ಅದನ್ನು ವಿಜ್ಞಾನಿಯು ಇಂದ್ರಿಯಗೋಚರ ವಸ್ತು-ವಿಷಯಗಳ ಮೂಲಕ ಅಧ್ಯಯನ ಮಾಡುವುದನ್ನು ವಿಜ್ಞಾನವೆನ್ನುತ್ತೇವೆ ; ಇಂದ್ರಿಯಗಳನ್ನೂ ಮೀರಿಹೋಗಿ ಅದೇ ಸತ್ಯವನ್ನು ಅರಿಯುವ ಪ್ರಯತ್ನ ಧರ್ಮವಾಗುತ್ತದೆ. ಸ್ವಾಮಿ ವಿವೇಕಾನಂದರು ಸತ್ಯದ ಈ ಎರಡು ಮುಖಗಳನ್ನೂ ಕಂಡವರು. ಅವರ ಕಾಲದ ನಂತರ ಸ್ವಾಮೀಜಿಯನ್ನು ನೆನೆಯುವಾಗ ಮಿಸ್ ಜೋಸೆಫಿನ್ ಮೆಕ್ ಲೌಡ್ ಹೇಳುತ್ತಾಳೆ: "ನಾನು ಕೇಳಿದ ಅವರ ಮೊದಲ ಭಾಷಣದಲ್ಲಿ ಮೊದಲ ವಾಕ್ಯ ಸತ್ಯವಾಗಿದ್ದಿತು. ಎರಡನೆಯ ವಾಕ್ಯ ಸತ್ಯವಾಗಿದ್ದಿತು. ಮೂರನೆ ವಾಕ್ಯ ಸತ್ಯವಾಗಿದ್ದಿತು. ಆಮೇಲೆ ನಾನು ಅವರೊಡನೆ ಇರುತ್ತಿದ್ದಾಗ ಅವರು ನುಡಿದ ಪ್ರತಿಮಾತೂ ಸತ್ಯವಾಗಿದ್ದಿತು."

ಸ್ವಾಮಿ ವಿವೇಕಾನಂದರು ಸತ್ಯದ ಆರಾಧಕರಾಗಿದ್ದುದರಿಂದಲೇ ಅವರಿಗೆ ವೈಜ್ಞಾನಿಕ ಮನೋಭಾವ ಸ್ವಾಭಾವಿಕವಾಗಿಯೇ ಮೈಗೂಡಿದ್ದಿತು.

# "ವಚನವೇದ"ದ ಓದು ಅಧ್ಯಯನಯೋಗ

ಕೋ. ಚೆನ್ನಬಸಪ್ಪ

"ಅಧ್ಯಯನಯೋಗ"ವೆಂಬ ಒಂದು ಹೊಸ ಸಾಧನೆಯ ವಿಧಾನವನ್ನು ಪರಿಚಯಿಸಿಕೊಟ್ಟಿರುವ ಶ್ರೀ ಕೋ. ಚೆನ್ನಬಸಪ್ಪನವರು ನಿವೃತ್ತ ನ್ಯಾಯಾಧೀಶರು ಮತ್ತು ಹಲವಾರು ಆಧ್ಯಾತ್ಮಿಕ ಕೃತಿಗಳನ್ನು ರಚಿಸಿ ಕನ್ನಡ ಓದುಗರಿಗೆ ಚಿರಪರಿಚಿತರಾಗಿರುವರು.

"ಶ್ರೀರಾಮಕೃಷ್ಣ ವಚನವೇದ" ಗ್ರಂಥಕ್ಕೆ ಕುವೆಂಪು ಮುನ್ನುಡಿ ಬರೆಯುತ್ತಾ: "......ಯಾವ ಮನೆಯಲ್ಲಿ ಈ 'ವಚನವೇದ' ವಿರುತ್ತದೆಯೊ ಅದು ಮಂದಿರವಾಗುತ್ತದೆ. ಯಾರ ಕೈ ಇದನ್ನು ಹಿಡಿಯುತ್ತದೆಯೊ ಅದು ಭಗವಂತನ ಪಾದಾರವಿಂದವನ್ನೇ ಧರಿಸುತ್ತದೆ. ಯಾರ ಜಿಹ್ವೆ ಇದನ್ನು ಪಠಿಸುತ್ತದೆಯೊ ಅದು ಅಮೃತವನ್ನೇ ಈಂಟುತ್ತದೆ. ಇದು ಆನಂದದ ಆಗರ; ಶಾಂತಿಯ ಸಾಗರ; ದಿವ್ಯಜ್ಞಾನದ ಓಗರ .... ಕತ್ತಲಲ್ಲಿ ದೀಪ, ದಾರಿಗೆ ಊರುಗೋಲು, ದಿಕ್ಕುಗೆಡದಂತೆ ಗುರಿದೋರುವ ಧ್ರುವತಾರೆ. ಇಲ್ಲಿ ವೇದ ವೇದಾಂತದ ಸಾರವಿದೆ...."

ಹೀಗೆ ಮಹಾಕವಿ ಗುರುಮಹಾರಾಜರಲ್ಲಿ ತಮಗೆ ಇರುವ ಭಕ್ತಿ ನಿರ್ಭರತೆಯಿಂದ ತಮ್ಮ ಕಾವ್ಯಶಕ್ತಿಯನ್ನೆಲ್ಲ ಧಾರೆಯೆರೆದು "ವಚನವೇದ"ದ ಮಾಹಾತ್ಮ್ಯವನ್ನು ವರ್ಣಿಸಿದ್ದಾರೆ. ಅದನ್ನು ಪರಿಪೂರ್ಣವಾಗಿ ವರ್ಣಿಸಲು ಸಾಧ್ಯವಾಗದೆ ಕೊನೆಯಲ್ಲಿ: "ಇಷ್ಟು ಸರ್ವಜನ ಸಾಮಾನ್ಯ ರೂಪದಲ್ಲಿ ಇಷ್ಟು ಸರ್ವಸುಲಭ ರೂಪದಲ್ಲಿ ಭಗವಂತ ಎಂದೂ ಅವತರಿಸಿರಲಿಲ್ಲ" ಎಂದು ನಿಲ್ಲಿಸುತ್ತಾರೆ. ಮಹಾಕವಿ ಆ ಅವತಾರವರಿಷ್ಠರ ವಾಣಿಯನ್ನು ಪರಿಪೂರ್ಣವಾಗಿ ಯಥಾವತ್ತಾಗಿ ವರ್ಣಿಸಲಾರದೆ ಕೊನೆಗೆ ಅದು ಭಗವಂತನ ಅವತಾರ ಎಂದು ತೃಪ್ತಿಪಡಬೇಕಾಯ್ತು.

ಆದರೂ ಯಾವುದು ಮಾತು ಮನಗಳಿಂದ ಅತ್ತತ್ತ ಇದೆಯೊ ಅದನ್ನು ಮಾತಿನಿಂದ ಅಡಿಕೊಳ್ಳದೆ ಸಾಧಕರಿಗೆ ಬೇರೆ ದಾರಿಯಿಲ್ಲ. ಆದ್ದರಿಂದ ಕುವೆಂಪು ನಿಲ್ಲಿಸಿದ ಕಡೆಯಿಂದ ಅವರ ಮಾತನ್ನೇ ಒಂದು ಹೆಜ್ಜೆ ಮುಂದಕ್ಕೆ ಕೊಂಡೊಯ್ದು: "ಯಾರು ಇದನ್ನು ಓದುತ್ತಾರೆಯೊ ಅವರು ಸಾಕ್ಷಾತ್ ಪರಮಹಂಸರೊಡನೆ ಮಾತನಾಡುತ್ತಾರೆ; ಅಕ್ಷರಶಃ ಅನುಸಂಧಾನ ನಡೆಸುತ್ತಾರೆ. ಅವರೊಡನೆ ಒಂದಾಗುತ್ತಾರೆ" ಎಂದು ಸೇರಿಸಿದರೆ ಮುಂದಿನ ಮಾತಿಗೆ ಎಡೆಯೆಲ್ಲಿ? ಎಲ್ಲ ಸಾಧನೆಯ ಗುರಿಯೂ ಗಮ್ಯವೂ ಇದೇ ತಾನೆ? ಅದು ಸಿದ್ಧಿಸಿದರೆ ಇನ್ನಾತರ ಸಾಧನೆ ಬೇಕು?

"ವಚನವೇದ"ವನ್ನು ಓದುವುದು "ಅಧ್ಯಯನಯೋಗ." ಧ್ಯಾನಯೋಗ, ಜ್ಞಾನ, ಭಕ್ತಿ, ಕರ್ಮಯೋಗಗಳಿಗಿಂತ ಸುಲಭ ಈ ವಚನವೇದಾಧ್ಯಯನ ಯೋಗ. ಎಲ್ಲ ಯೋಗಗಳ ಗುರಿಯೂ ಧ್ಯೇಯ ವಸ್ತುವಿನಲ್ಲಿ ಮನಸ್ಸು, ಬುದ್ಧಿ, ಚಿತ್ತ ಸಹಿತ ಸಕಲ ಕರಣೇಂದ್ರಿಯಗಳನ್ನು ಕೇಂದ್ರೀಕರಿಸಿ "ಅದನ್ನು" ಪಡೆದುಕೊಳ್ಳುವುದೆ ತಾನೆ? ಆ ತಾದಾತ್ಮ್ಯ ಈ ವಚನವೇದವನ್ನು ಓದುವುದರಿಂದ ಸುಲಭವಾಗಿ ಸಾಧ್ಯವಾಗುವುದಾದರೆ ಇದನ್ನು "ಅಧ್ಯಯನಯೋಗ" ಎಂದು ಕರೆಯುವುದರಲ್ಲಿ ಅನುಸರಿಸುವುದರಲ್ಲಿ ಸಂದೇಹವೇಕೆ?

ಧ್ಯಾನಸ್ಥರಾದಾಗ, ಧ್ಯಾನಮಗ್ನರಾದಾಗ ಧ್ಯೇಯವಸ್ತುವಿನಲ್ಲಿ ಕರಣೇಂದ್ರಿಯಗಳೆಲ್ಲ ಕೇಂದ್ರೀಕೃತವಾಗಿ ಎಬಾಹ್ಯಪ್ರಪಂಚಜ್ಞಾನ